ಅಬ್ದುಲ್ಲಾ ಏನೂ ಮಾತನಾಡಲಿಲ್ಲ.

ಎಂಎಲ್ಎ ತಾನು ಕುರ್ಚಿಯಿಂದ ಎದ್ದು ಸ್ವಲ್ಪ ಹೊತ್ತು ಅತ್ತಿತ್ತ ಓಡಾಡಿ ಮತ್ತೆ ಬಂದು ಕುಳಿತ. ಎದುರಿನ ಟೀಪಾಯಿಯ ಮೇಲಿದ್ದ ಆ್ಯಪಲ್ ಫೋನ್ ಕೈಗೆತ್ತಿಕೊಂಡು ಅಮ್ಮನವರ ಶಾಲೆ ರಸ್ತೆಯಲ್ಲಿರುವ ತಮ್ಮ ಕುಲದವನ ಟೈಲರ್ ಅಂಗಡಿಗೆ ಫೋನ್ ಮಾಡಿದ.

"ಏನಪ್ಪಾ ಚೆನ್ನಾಗಿದೀಯಾ? ಏನಿಲ್ಲ. ಅರ್ಜೆಂಟಾಗಿ ನಾಲ್ಕುನೂರು ಬುರ್ಖಾಗಳು ಬೇಕು. ನಾಳೆಗೆ ರೆಡಿ ಮಾಡಿಬಿಡು'' ಎಂದು ಆರ್ಡರ್ ಕೊಟ್ಟ.

ಅಬ್ದುಲ್ಲಾನಿಗೆ ಮನಸ್ಸಿನಲ್ಲಿಯೇ ಖುಷಿಯಾಯಿತು. ಎಂಎಲ್ಎಗೆ ಗೌರವಪೂರ್ವಕವಾಗಿ ನಮಸ್ಕಾರ ಮಾಡಿ ಮನೆಗೆ ಬಂದ.

ಇದು ನಡೆದ ಎರಡು ದಿನಕ್ಕೆ ಮೊದಲೇ ಅಬ್ದುಲ್ಲಾನ ವಾರ್ಡ್ ಕಚೇರಿಗೆ ನಾಲ್ಕುನೂರು ಬುರ್ಖಾಗಳು ಬಂದುಬಿದ್ದವು. ತನ್ನ ಜೊತೆ ಇದ್ದು ಚುರುಕಾಗಿ ಓಡಾಡುವ ನಾಲ್ಕು ಕಾಲೇಜು ಹುಡುಗರಾದ 'ರಾಮಾಂಜಿ, ಬಾಷಾ, ಜಿಲಾನಿ, ಚಂಟಿ'ಯರನ್ನು ಕರೆದು ಈ ಬುರ್ಖಾಗಳನ್ನು ಮನೆಮನೆಗೆ ಸುತ್ತಾಡಿ ಮಹಿಳೆಯರಿಗೆ ಹಂಚುವ ಕೆಲಸ ವಹಿಸಿದ. ಅವರಲ್ಲಿ ಬಾಷಾ, ಚಂಟಿ ಇಬ್ಬರೂ ಉತ್ಸಾಹ ಮತ್ತು ಸಮಯಸ್ಫೂರ್ತಿಯುಳ್ಳವರು.

"ಮಹಿಳೆಯರಿಗೆ ಬುರ್ಖಾಗಳನ್ನು ಹಂಚುವಾಗ ಬಾಯಿ ಜಾರಿ ಏನಾದರೂ ಹೇಳಿಬಿಟ್ಟೀರೋ... ಮೈ ಮೇಲೆ ನಿಗಾ ಇಟ್ಟು ಹಂಚಿರಿ..." ಎಂದು ಎಚ್ಚರಿಕೆ ಕೊಟ್ಟು ಕಳುಹಿಸಿದ ಅಬ್ದುಲ್ಲಾ.

ಅವರನ್ನು ಕಳುಹಿಸಿದನಾದರೂ ಅವನಿಗೆ ಮನಸ್ಸಿನಲ್ಲಿ ಒಂದು ರೀತಿಯ ಅಸಮಾಧಾನ ಕಾಡುತ್ತಿತ್ತು.

"ಮಹಿಳೆಯರಿಗೆ ಬುರ್ಖಾಗಳನ್ನು ಹಂಚುವುದರಿಂದಲೇ ಅವರ ಬಡತನ ನಿವಾರಣೆಯಾಗುವುದಿಲ್ಲವಲ್ಲ. ಈ ದೇಶದಲ್ಲಿ ಮುಸಲ್ಮಾನರು ಉದ್ಧಾರವಾಗಬೇಕೆಂದರೆ ತನ್ನಂತಹವರು ಹೆಚ್ಚು ಕೆಲಸ ಮಾಡಬೇಕು. ಮುಸಲ್ಮಾನರನ್ನು ವೋಟುಬ್ಯಾಂಕುಗಳಾಗಿ ನೋಡುವುದನ್ನು ಬಿಡಬೇಕು." ಎಂದು ಪರಿಪರಿಯಾಗಿ ಯೋಚಿಸಿದ.

ಅಬ್ದುಲ್ಲಾ ಹೀಗೆ ಯೋಚಿಸುತ್ತಿರುವಾಗಲೇ ಒಂದು ದಿನ ಬೆಳಿಗ್ಗೆ ಮತ್ತೆ ರಾಮುಲು ಎದುರಿಗೆ ಬಂದು ನಿಂತ.

"ಅಣ್ಣ ಹೇಳಿ ಬಾ ಎಂದರು, ಈ ಶುಕ್ರವಾರ ಆರ್ಟ್ ಕಾಲೇಜು ಗ್ರೌಂಡಿನಲ್ಲಿ ದೊಡ್ಡ ಮೀಟಿಂಗ್ ಇದೆಯಂತೆ. ಪಾರ್ಟಿ ಅಧ್ಯಕ್ಷರು ಕೂಡ ಬರ್ತಾ ಇದ್ದಾರೆ. ಮೀಟಿಂಗಿನಲ್ಲಿ ಎಲ್ಲ ಬುರ್ಖಾಗಳೇ ಕಾಣಿಸಬೇಕೆಂದು ಹೇಳಿದ್ದಾರೆ. ಇದು ಬಹಳ ಮುಖ್ಯವಂತೆ."

"ಸರಿ" ಎಂದ ಅಬ್ದುಲ್ಲಾ. ಆದರೆ ಆತಂಕ ಶುರುವಾಯಿತು.

ಯಾಕೆಂದರೆ ಪೆನುಗೊಂಡ ಬಾಬಯ್ಯ ಸ್ವಾಮಿ ಉರುಸು ನಡೆಯಲಿರುವುದು ಕೂಡ ಶುಕ್ರವಾರವೇ. ಹೆಂಗಸರೆಲ್ಲ ಉರುಸಿಗೆ ಹೋಗಲಿದ್ದಾರೆ... ಹರಕೆ ತೀರಿಸಲು. ಯಾವುದೋ ಎರಡು ಮೂರು ಕುಟುಂಬಗಳನ್ನು ಬಿಟ್ಟು ಹೆಚ್ಚು ಜನ ಉರುಸಿಗೆ ಹೋಗುತ್ತಾರೆ. ಈಗ ಬುರ್ಖಾ ಹಂಚಿದ್ದೀವಲ್ಲವಾ ಎಂದು ಉರುಸು ಬಿಟ್ಟು ಬನ್ನಿ ಎಂದರೆ ತಿರುಗಿ ಬಿದ್ದರೂ ಬೀಳಬಹುದು... ಹಾಗೆಂದು ಎಂಎಲ್ಎ ಮೀಟಿಂಗಿಗೆ ಚಕ್ಕರ್ ಹಾಕಿದರೆ ಮರ್ಯಾದೆ ಇರುವುದಿಲ್ಲ. ಇದು ಅಬ್ದುಲ್ಲಾನಿಗೆ ಎದುರಾದ ಸಂಕಟ.

ಒಂದೇ ಸಮನೆ ಯೋಚಿಸುತ್ತಿದ್ದಾಗ ಮೊನ್ನೆ ಬುರ್ಖಾಗಳನ್ನು ಹಂಚಿದ ಆ ನಾಲ್ಕು ಹುಡುಗರಲ್ಲಿ ಬಾಷಾ, ಚಂಟಿ ಅಲ್ಲಿಗೆ ಬಂದರು. "ಯಾಕಣ್ಣ ಡಲ್ ಆಗಿದ್ದೀಯಾ?" ಎಂದು ಕೇಳಿದ ಚಂಟಿ.

ಅಬ್ದುಲ್ಲಾ ತನಗೆದುರಾಗಿರುವ ಸಮಸ್ಯೆಯನ್ನು ವಿವರಿಸಿದ.